ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಹಣ ಒದಗಿಸಲಾಗಿದೆ.

ರೂ.ಲಕ್ಷಗಳಲ್ಲಿ

ವರ್ಷ	ಅನುದಾನ	ವೆಚ್ಚ
2002–03	**4.00**	**0.03**
2003–04	**8.33**	**11.82**
2004–05	**12.49**	**9.05**
ಒಟ್ಟು	**24.82**	**20.90**

ಆ) ರೂ. 20.90 ಲಕ್ಷ ವೆಚ್ಚ ಮಾಡಲಾಗಿದೆ.

ಇ) ಕಳಪೆ ಕಾಮಗಾರಿಯಾಗಿದೆ ಎಂದು ದೂರು ಬಂದಿತ್ತು.

ಈ) ಶ್ರೀ ಬಿ.ಬೋಪಣ್ಣ, 1ನೇ ದರ್ಜೆ ಗುತ್ತಿಗೆದಾರರು, ಶಿರಾ. ದೂರಿನ ಬಗ್ಗೆ ತನಿಖೆ ನಡೆಸಲಾಗಿದ್ದು, ಅದರಂತೆ ಕೆಲವು ಸಣ್ಣ ಪುಟ್ಟ ದೋಷಗಳನ್ನು ಬಿಟ್ಟರೆ ಒಟ್ಟಾರೆ ಕೆಲಸವು ತೃಪ್ತಿಕರವಾಗಿದ್ದು, ಆ ಹಿನ್ನೆಲೆಯಲ್ಲಿ ಯಾರ ವಿರುದ್ಧವೂ ಕ್ರಮ ಕೈಗೊಳ್ಳುವ ಅವಶ್ಯಕತೆ ಕಂಡು ಬಂದಿಲ್ಲ.

4351 (5228) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮೀನುಗಾರಿಕಾ ಇಲಾಖೆಯ ರಸ್ತೆಗಳ ಒಟ್ಟು ಉದ್ದ ಎಷ್ಟು, ಅವುಗಳ ದುರಸ್ತಿಗಾಗಿ ಕಳೆದ ಎರಡು ವರ್ಷಗಳಲ್ಲಿ ಖರ್ಚು ಮಾಡಿದ ಹಣ ಎಷ್ಟು;

ಆ) ರಾಜ್ಯದಲ್ಲಿ ಮೀನುಗಾರಿಕಾ ಇಲಾಖೆಯವರು ಎಷ್ಟು ಕಿ.ಮೀ ಉದ್ದ ರಸ್ತೆಗಳನ್ನು ಹೊಂದಿದ್ದಾರೆ, ಮೀನುಗಾರಿಕಾ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಸರಕಾರ ಮೀಸಲಿಡುವ ಖಾಯಂ ಅನುದಾನದ ಮೊತ್ತ ಎಷ್ಟು; (ಕರಾವಳಿ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿಗಳನ್ನು ನೀಡುವುದು);

ಇ) ಮೀನುಗಾರಿಕಾ ಇಲಾಖಾ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸರಕಾರದ ಸಕಾಲಿಕ ಕ್ರಮಗಳೇನು; ಇಲಾಖೆಯ ಹೊಸ ರಸ್ತೆಗಳ ಕಾರ್ಯ ಯೋಜನೆಯ ವಿವರಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 8 ಮೀನುಗಾರಿಕಾ ಇಲಾಖೆಯ ರಸ್ತೆಗಳ ಒಟ್ಟು ಉದ್ದ 10.46 ಕಿ.ಮೀ ಅವುಗಳ ದುರಸ್ತಿಗಾಗಿ ಕಳೆದ 2 ವರ್ಷಗಳಲ್ಲಿ ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

ವರ್ಷ	ವೆಚ್ಚ
2003–2004	ಇಲ್ಲ
2004–2005	ರೂ.7.00 ಲಕ್ಷ

ಆ) ರಾಜ್ಯದ ಕರಾವಳಿಯ 3 ಜಿಲ್ಲೆಗಳಲ್ಲಿ ಒಟ್ಟು 174 ಮೀನುಗಾರಿಕೆ ಕೊಂಡಿ ರಸ್ತೆಗಳು (275 ಕಿ.ಮೀ) ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುತ್ತದೆ.

ಈ ರಸ್ತೆಗಳಿಗಾಗಿ ಖಾಯಂ ಅನುದಾನವನ್ನು ತಾಲ್ಲೂಕುವಾರು ಮೀಸಲಿಡಲಾಗುತ್ತಿಲ್ಲ. ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಕರಾವಳಿಯ 3 ಜಿಲ್ಲೆಗಳಿಗೆ ಒಟ್ಟಾರೆ ರೂ.101.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಇ) ಮೀನುಗಾರಿಕೆ ರಸ್ತೆಗಳ ದುರಸ್ತಿ ಮತ್ತು ನಿರ್ವಹಣೆಯನ್ನು ಪ್ರತಿವರ್ಷ ಒದಗಿಸಲಾಗುವ ಸೀಮಿತ ಅನುದಾನದಲ್ಲಿ ಆದ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಈ ರಸ್ತೆಗಳ ದುರಸ್ತಿಗಾಗಿ ಹೆಚ್ಚಿನ ಅನುದಾನವನ್ನು ಸಹ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಿಂದ ಜಿಲ್ಲಾ ಪಂಚಾಯತ್‌ಗಳಿಗೆ ಕೊಂಡಿ ರಸ್ತೆಗಳ ಯೋಜನೆಯನ್ನು ವರ್ಗಾಯಿಸಲಾಗಿದ್ದು ಪುನಃ ಈ ಯೋಜನೆಯನ್ನು ಉತ್ತಮ ನಿರ್ವಹಣೆ ಹಾಗೂ ಹೆಚ್ಚಿನ ಅನುದಾನ ಲಭ್ಯವಾಗುವ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಈ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ರೂ.2.00 ಕೋಟಿ ಅನುದಾನವನ್ನು ಒದಗಿಸಲು ಯೋಜಿಸಲಾಗಿದೆ.